ಓ.ಎಸ್. 296/2015

ಪಿಡಬ್ಲ್ಯು:

ದಿನಾಂಕ.15-12-2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ವಕೀಲರಿಂದಃ**

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ವನ್ನು ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ದಾವಾ ಸ್ವತ್ತಿಗೆ ಸಂಬಂಧಿಸಿದಿ ನಿಪಿ-1 ಎಂದು ಗುರುತಿಸಲಾಯಿತು.

**ಪಾಟೀಸ ವಾಲು ಶ್ರೀ ಇ.ಟಿ.ಆರ್. ವಕೀಲರಿಂದಃ**

ದಾವಾ ಸ್ವತ್ತು ವಾದಿ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ವಾದಿಯ ಸ್ವಾಧೀನಕ್ಕೆ ದಾವಾ ಸ್ವತ್ತಿನ ಹತ್ತಿರ ಬಂದು ತಂಟೆ ತಕರಾರು ಮಾಡಿಲ್ಲ ಎಂದರೆ ಸರಿ. ವಾದಿ ದಾವಾ ಸ್ವತ್ತು ಖರೀದಿಸಿದಾಗಿನಿಂದ ಇಂದಿನವರೆಗೂ ಪ್ರತಿವಾದಿಯರು ಆಕೆಯ ಸ್ವಾಧೀನಕ್ಕೆ ತಂಟೆ ತಕರಾರು ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯರು ಯಾವುದೇ ತಂಟೆ ತಕರಾರು ಮಾಡದಿದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ.ನ್ಯಾಸಾ. ಹೇ. ನನ್ನ ಉಕ್ತಲೇಖನದಿಂದ ಬೆರಳಚ್ಚು ಮಾಡಲಾಯಿತು.)

ಓ. ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ.

ಅಪರ ಸಿವಿಲ್ ಮತ್ತು ಜೆಎಂಎಫ್‌ಸಿ.,
ಹೊಸದುರ್ಗ.